ನಿವೇದನೆ

# ವಿಶ್ವವಿದ್ಯಾಲಯ ಮುಚ್ಚುವ ನಿರ್ಧಾರ: ಪರಿಣಾಮದ ಬಗ್ಗೆ ನಡೆಯಲಿ ಗಂಭೀರ ಅವಲೋಕನ

> ವಿಶ್ವವಿದ್ಯಾಲಯದ ಸ್ಥಾಪನೆಯ ಹಿಂದೆ ಹೇಗೆ ಸ್ಪಷ್ಟವಾದ ಧ್ಯೇಯೋದ್ದೇಶ ಇರಬೇಕೋ ಹಾಗೆಯೇ ಸ್ಥಾಪನೆಯಾಗಿ ಬೋಧನೆ ಶುರು ಮಾಡಿದ ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚುವುದರಿಂದ ಆಗುವ ಪರಿಣಾಮಗಳ ಬಗೆಗೂ ಗಂಭೀರ ಅವಲೋಕನ ಆಗಬೇಕು. ತಜ್ಞರ ಜೊತೆ ಸಮಾಲೋಚಿಸಬೇಕು.

ನಮ್ಮಲ್ಲಿ ಆಡಳಿತದ ಸೂತ್ರ ಹಿಡಿದವರು ಶಿಕ್ಷಣ ಕ್ಷೇತ್ರವನ್ನು ಪ್ರಯೋಗಶಾಲೆ ಎಂದು ಭಾವಿಸಿದಂತಿದೆ. ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೂ ಈ ಮಾತು ಅನ್ವಯಿಸುತ್ತದೆ. ಬಹಳ ಗಂಭೀರವಾಗಿ ಪರಿಗಣಿಸಬೇಕಾಗಿದ್ದ ಕ್ಷೇತ್ರವನ್ನು ಅತ್ಯಂತ ಲಘುವಾಗಿ ಪರಿಗಣಿಸಲಾಗುತ್ತಿದೆ. ಈ ಕ್ಷೇತ್ರಕ್ಕೆ ಸಂಬಂಧಿಸಿದ ನೀತಿ–ನಿರ್ಧಾರಗಳಿಗೆ ವೈಜ್ಞಾನಿಕ ತಳಹದಿಯಾಗಲೀ ತಜ್ಞರ ಅಭಿಪ್ರಾಯವಾಗಲೀ ಚರ್ಚೆ–ಸಂವಾದಗಳ ಅಗತ್ಯವಾಗಲೀ ಬೇಕು ಅಂತ ಅಧಿಕಾರಸ್ಥರಿಗೆ ಅನ್ನಿಸುತ್ತಲೇ ಇಲ್ಲ. ದೂರಗಾಮಿ ಪರಿಣಾಮಗಳ ಬಗೆಗೆ ಲಕ್ಷ್ಯವೇ ಇಲ್ಲ. ಇದಕ್ಕೆ ಆಡಳಿತ ನಡೆಸುವ ಪಕ್ಷ ಮತ್ತು ಅದರ ಸೂತ್ರ ಹಿಡಿದ ವ್ಯಕ್ತಿಗಳ್ಯಾರೂ ಹೊರತಾಗಿಲ್ಲ!

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ, ವಿಶ್ವವಿದ್ಯಾಲಯ ಅನುದಾನ ಆಯೋಗದಂತಹ ಸಂಸ್ಥೆಗಳು ಕೂಡ ರಾಜಕೀಯ ದಾಳಗಳಾಗಿ ಬಳಕೆಯಾಗುತ್ತಿವೆ ಎಂಬ ಆರೋಪಗಳಲ್ಲಿ ಹುರುಳಿಲ್ಲದೇ ಇಲ್ಲ. ಪಠ್ಯಪುಸ್ತಕಗಳ ಪರಿಷ್ಕರಣೆ ಹೆಸರಿನಲ್ಲಿ ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟ ಆಡುವ ಪ್ರವೃತ್ತಿ ಇತ್ತೀಚಿನ ವರ್ಷಗಳಲ್ಲಿ ವಿಪರೀತಕ್ಕೆ ಹೋಗಿದೆ. ಶಿಕ್ಷಣವನ್ನು ಒಂದು ಸಾಧನವಾಗಿ ಬಳಸಿಕೊಂಡು ಯುವ ಮನಸ್ಸುಗಳ ಮೇಲೆ ತಮ್ಮ ಸಿದ್ಧಾಂತವನ್ನು ಹೇರುವ ಪ್ರಯತ್ನವನ್ನು ಆಡಳಿತ ನಡೆಸುವ ಪಕ್ಷಗಳು ಮಾಡುತ್ತಲೇ ಇವೆ.

ನಮ್ಮ ಸರ್ಕಾರಿ ಶಾಲೆ–ಕಾಲೇಜುಗಳ ಸ್ಥಿತಿ ಬಗ್ಗೆ ಹೇಳುವಂತೆಯೇ ಇಲ್ಲ. ಸ್ವಾತಂತ್ರ್ಯದ ಅಮೃತ ಮಹೋತ್ಸವ ಮುಗಿದರೂ ಜ್ಞಾನದೇಗುಲಗಳಲ್ಲಿನ ಕೊರತೆ ನೀಗಿಸಲು ನಮಗೆ ಸಾಧ್ಯವಾಗಿಲ್ಲ. ಮೂಲ ಸೌಕರ್ಯ ಕೊರತೆ, ಅಧ್ಯಾಪಕರ ಕೊರತೆ, ಗುಣಮಟ್ಟದ ಕೊರತೆಯಂತಹವುಗಳ ಜೊತೆಗೆ ವಿದ್ಯಾರ್ಥಿಗಳ ಕೊರತೆಯೂ ಬಾಧಿಸುತ್ತಿರುವುದು ನಮ್ಮ ಶಿಕ್ಷಣ ಸಂಸ್ಥೆಗಳ ಶೋಚನೀಯ ಸ್ಥಿತಿಗೆ ನಿದರ್ಶನವಾಗಿದೆ. ಗುಣಮಟ್ಟ ಎತ್ತರಿಸಲು ಗಂಭೀರ ಪ್ರಯತ್ನಗಳೇ ಕಾಣುತ್ತಿಲ್ಲ. ತೇಪೆ ಹಚ್ಚುವುದರಲ್ಲೇ ತೃಪ್ತಿ ಕಾಣುವಂತಹ ಸ್ಥಿತಿ ಇದೆ.

ಇದರ ನಡುವೆ ವಿಶ್ವವಿದ್ಯಾಲಯಗಳ ಸಂಖ್ಯೆ ಮಾತ್ರ ಹೆಚ್ಚುತ್ತಲೇ ಇದೆ. ವಿಶ್ವವಿದ್ಯಾಲಯಗಳನ್ನು ಗೊತ್ತುಗುರಿ ಇಲ್ಲದಂತೆ ಸ್ಥಾಪಿಸಲಾಗುತ್ತಿದೆ. ಘೋಷಣೆ ಹೊರಬೀಳುತ್ತದೆ. ಅದರಂತೆ ಹೊಸ ವಿಶ್ವವಿದ್ಯಾಲಯ ತಲೆ ಎತ್ತುತ್ತದೆ. ಕುಲಪತಿ, ಕುಲಸಚಿವರು ನೇಮಕಗೊಳ್ಳುತ್ತಾರೆ. ಬೆಟ್ಟದಷ್ಟು ಭರವಸೆ ಹೊತ್ತು ವಿದ್ಯಾರ್ಥಿಗಳು ಕೂಡ ಪ್ರವೇಶ ಪಡೆಯುತ್ತಾರೆ. ಆದರೆ ಪಾಠ ಬೋಧನೆಗೆ ಪೂರ್ಣಾವಧಿಯ ಅಧ್ಯಾಪಕರೇ ಇರುವುದಿಲ್ಲ. ಪಾಠಕೋಣೆಗಳು, ಗ್ರಂಥಾಲಯ ಸೇರಿದಂತೆ ಮೂಲಸೌಕರ್ಯ ಇರುವುದಿಲ್ಲ. ವರ್ಷಗಳೇ ಉರುಳಿದರೂ ಈ ಸ್ಥಿತಿಯಲ್ಲಿ ಗಮನಾರ್ಹ ಬದಲಾವಣೆಗಳು ಕಾಣಸಿಗುವುದಿಲ್ಲ.

ವಿಶ್ವವಿದ್ಯಾಲಯಗಳನ್ನು ಆರಂಭಿಸಿದ ಉದ್ದೇಶಕ್ಕೂ ನಂತರದ ವಾಸ್ತವ ಸ್ಥಿತಿಗೂ ಆಕಾಶ–ಭೂಮಿಯಷ್ಟು ಅಂತರ ಏರ್ಪಡುತ್ತದೆ. ಅನುದಾನಕ್ಕಾಗಿ ಅಂಗಲಾಚುವಂತಹ ಸ್ಥಿತಿ. ಬೋಧಕರಿಲ್ಲದ ಕಾರಣಕ್ಕಾಗಿ ನಿಸ್ಸಹಾಯಕ ಸ್ಥಿತಿಯಲ್ಲಿ ವಿದ್ಯಾರ್ಥಿ ಸಮೂಹವು ದಿನ ದೂಡುವಂತಹ ಪರಿಸ್ಥಿತಿ. ಹೊಸ ವಿಶ್ವವಿದ್ಯಾಲಯಗಳು ಹಣಕಾಸಿನ ಕೊರತೆಯಿಂದ ಮಾತ್ರವಲ್ಲ, ಬೌದ್ಧಿಕ ದಾರಿದ್ರ್ಯದಿಂದಲೂ ಸೊರಗುವಂತಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಅನುದಾನ ಹೆಚ್ಚಿಸುವ ಇರಾದೆ ಸರ್ಕಾರಗಳಿಗೆ ಇಲ್ಲ ಎಂಬುದು ಪ್ರತಿವರ್ಷದ ಬಜೆಟ್ ಮಂಡನೆ ವೇಳೆ ಮನದಟ್ಟಾಗುತ್ತಲೇ ಇರುತ್ತದೆ.

ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ರಾಜ್ಯದಲ್ಲಿ ಹೊಸದಾಗಿ ಹತ್ತು ವಿಶ್ವವಿದ್ಯಾಲಯಗಳು ಪ್ರಾರಂಭವಾದವು. ಇವುಗಳ ಪೈಕಿ ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚಲು ಸಚಿವ ಸಂಪುಟ ಉಪಸಮಿತಿ ಒಲವು ವ್ಯಕ್ತಪಡಿಸಿದೆ ಎಂದು ಈಚೆಗೆ ವರದಿಯಾಗಿದೆ. ತರಾತುರಿಯಲ್ಲಿ, ಸೂಕ್ತ ಪೂರ್ವಸಿದ್ಧತೆ ಇಲ್ಲದೆ ಈ ಹಿಂದಿನ ಸರ್ಕಾರವು ವಿಶ್ವವಿದ್ಯಾಲಯಗಳನ್ನು ಆರಂಭಿಸಿತು ಎಂಬ ಆರೋಪದಲ್ಲಿ ಸತ್ಯಾಂಶ ಇದ್ದಿರಬಹುದಾದರೂ ಅವು ನೆಲದೊಳಗೆ ಬೇರಿಳಿಸುವ ಮೊದಲೇ ಅವುಗಳನ್ನು ಮುಚ್ಚುವ ನಿರ್ಧಾರ ಎಷ್ಟರಮಟ್ಟಿಗೆ ವಿವೇಕಯುತ ಎಂಬ ಪ್ರಶ್ನೆಯೂ ಇಲ್ಲಿ ಉದ್ಭವಿಸುತ್ತದೆ.

ವಿಶ್ವವಿದ್ಯಾಲಯದ ಸ್ಥಾಪನೆಯ ಹಿಂದೆ ಹೇಗೆ ಸ್ಪಷ್ಟವಾದ ಧ್ಯೇಯೋದ್ದೇಶ ಇರಬೇಕೋ ಹಾಗೆಯೇ ಸ್ಥಾಪನೆಯಾಗಿ ಬೋಧನೆ ಶುರು ಮಾಡಿದ ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚುವುದರಿಂದ ಆಗುವ ಪರಿಣಾಮಗಳ ಬಗೆಗೂ ಗಂಭೀರ ಅವಲೋಕನ ಆಗಬೇಕು. ತಜ್ಞರ ಜೊತೆ ಸಮಾಲೋಚಿಸಬೇಕು. ವಿದ್ಯಾರ್ಥಿಗಳ ಹಿನ್ನೆಲೆ, ಅವರ ಆರ್ಥಿಕ–ಸಾಮಾಜಿಕ ಸ್ಥಿತಿಗತಿ, ಅವರ ಭವಿಷ್ಯದ ಮೇಲಾಗುವ ಪರಿಣಾಮಗಳು ಒಳಗೊಂಡಂತೆ ಎಲ್ಲ ಆಯಾಮಗಳೂ ನಿಕಷಕ್ಕೆ ಒಳಪಡಬೇಕು. ಶಿಕ್ಷಣದ ವಿಷಯದಲ್ಲಿ ರಾಜಕೀಯದ ಲೆಕ್ಕಾಚಾರ, ಹಣಕಾಸಿನ ವಿಷಯ ಇವಿಷ್ಟೇ ಮುಖ್ಯವಾಗಬಾರದು.

ವಿಶ್ವವಿದ್ಯಾಲಯಗಳ ಸ್ಥಾಪನೆ ಅಥವಾ ಅವುಗಳನ್ನು ಮುಚ್ಚುವಂತಹ ವಿಚಾರವನ್ನು ಸರ್ಕಾರಗಳು ಲಘುವಾಗಿ ಪರಿಗಣಿಸಬಾರದು. ಆರ್ಥಿಕ ಸ್ಥಿತಿಗತಿಯ ವಿಚಾರವೊಂದೇ ಅಂತಿಮ ನಿರ್ಧಾರಕ್ಕೆ ಅಳತೆಗೋಲು ಕೂಡ ಆಗಬಾರದು. ತಲೆಮಾರುಗಳ ಭವಿಷ್ಯ ರೂಪಿಸುವ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ನಿರ್ಧಾರಗಳು ಹೆಚ್ಚಿನ ದೂರದೃಷ್ಟಿಯನ್ನು ಬಯಸುವಂತಹವು. ವಿದ್ಯಾರ್ಥಿಕೇಂದ್ರಿತ ದೃಷ್ಟಿಕೋನದಿಂದ ಪರಾಮರ್ಶಿಸಬೇಕಾದುದು ಯಾವುದೇ ಜನಪರ ಸರ್ಕಾರದ ಆದ್ಯ ಕರ್ತವ್ಯ.

■ ಎನ್. ಉದಯಕುಮಾರ್



ಈಶ್ವರ್